
ಅದಕ್ಕೂ ಇದೇ ಕೋಣೆಯೇ ಗತಿ. ಇದೊಂದು ರೀತಿ ಕೋಪವನ್ನು ತೋರ್ಪಡಿಸಲು ಕೈಕೇಯಿ ಕೋಪಗೃಹ ಸೇರಿದಂತೆ, ಹೆಣ್ಣುಮಕ್ಕಳು ತಮ್ಮ ಸಂಕಟ ತೋಡಿಕೊಳ್ಳಲು, ತೋರಿಸಿಕೊಳ್ಳಲು ದೇವರ ಕೋಣೆಗೇ ಸೇರುತ್ತಿದ್ದುದು. ಕೊನೆಯ ಸೋದರತ್ತೆಯ ಮದುವೆ ವರದಕ್ಷಿಣೆ ಕಾರಣಕ್ಕೆ ಮುರಿದು ಹೋಗುವ ಹಂತದಲ್ಲಿದ್ದಾಗ, ಇದೇ ಕೋಣೆಯಲ್ಲಿ ಬಾಗಿಲನ್ನು ಧಡಾರನೆ ಹಾಕಿಕೊಂಡು, ಅದೇನೋ ಸೇವಿಸಿ ಮೂರ್ಛೆಹೋಗಿದ್ದಳು. ಭಾರವಿದ್ದ ಜೋಲಿಯನ್ನು ಬಾಗಿಲಿಗೆ ಅಡ್ಡ ಇಟ್ಟಿದ್ದರಿಂದ, ಮನೆಯ ಗಂಡಸರೆಲ್ಲ ಸೇರಿ ಬಾಗಿಲನ್ನು ಜೋರಾಗಿ ಗುದ್ದಿ ತೆರೆದು, ವೈದ್ಯರನ್ನು ಕರೆಸಿದ್ದಾಯಿತು. ಆಕೆಯ ಕೆನ್ನೆಗೆ ಹೊಡೆದು, ಬಾಯಿಯಲ್ಲಿ ಚಮಚವಿಟ್ಟು ಕಟಕಟ ಅಲುಗಾಡಿಸಿ, ಅಂಗೈ, ಪಾದಗಳನ್ನು ತಿಕ್ಕಿ, ಇಂಜೆಕ್ಷನ್ ಕೊಟ್ಟು ಎಚ್ಚರಿಸುವಲ್ಲಿ ಯಶಸ್ವಿಯಾಗಿದ್ದರು. ನಂತರ ಇದೇ ಕೋಣೆಯಲ್ಲಿ ಹಿರಿಯರ ದುಂಡುನೆಲದ ಸಭೆ ನಡೆದು, ಅಜ್ಜಿ ಹಾಗೂ ಮನೆಸೊಸೆಯರ ಬಂಗಾರದ ಒಡವೆಗಳನ್ನು ಮಾರಿ ಮದುವೆ ಮಾಡಿದ್ದು ಇತಿಹಾಸ. ಎಷ್ಟೋ ಸಲ ಅಮ್ಮ–ಅಜ್ಜಿಯ ಆಟಾಟೋಪಕ್ಕೆ ಸಿಕ್ಕು ಹೈರಾಣಾಗಿ, 'ನನಗೂ ಬೆಲೆ ಬೇಕು, ಸ್ವಾತಂತ್ರ್ಯ ಬೇಕು' ಎಂದು, ದೇವರಕೋಣೆಯಲ್ಲಿ ಅಳುತ್ತಾ ಮಲಗಿ ದಿನಪೂರ್ತಿ ಉಪವಾಸ ಧರಣಿ ಮಾಡಿದ್ದೂ ಇದೆ. ಅಜ್ಜ ನಡುವೆ ರಾಯಭಾರವಹಿಸಿ ಅವರಿಬ್ಬರನ್ನೂ ಒಂದುಮಾಡಿ, ಅಜ್ಜಿಯ ಕೈಯಿಂದಲೇ ಹಾಲನ್ನೋ ಹಣ್ಣನ್ನೋ ಅಮ್ಮನಿಗೆ ಕೊಡಿಸಿ, ಅವರಿಬ್ಬರ ಮುನಿಸಿಗೆ ನಾಂದಿ ಹಾಡಿದ್ದಿದೆ.

ಓದು ಬರಹದ ತಂಟೆಗೆ ಹೋಗದೆ ಇಡೀ ವರ್ಷ ಸದಾ ಕೇರಂ, ಬ್ಯಾಡ್ಮಿಂಟನ್ ಮತ್ತು ಕ್ರಿಕೆಟ್ಟು ಬ್ಯಾಟಿನ ಜೊತೆಗೇ ಕಾಲಕಳೆದು, ಹತ್ತನೆಯ ತರಗತಿ ಪರೀಕ್ಷೆ ಬರೆದ ಚಿಕ್ಕಪ್ಪ, ನೂರಕ್ಕೆ ನೂರು ಪ್ರತಿಶತ ಫೇಲಾಗುತ್ತಾನೆಂದು ಇಡೀ ಮನೆಯ ಜನರು ಫಲಿತಾಂಶದ ದಿನ ಅವನಿಗೆ ಮಂಗಳಾರತಿ ಮಾಡುತ್ತಲೇ ಕಾಯುತ್ತಿದ್ದಾಗ, ಕೋಪದಿಂದಲೋ, ಭಯದಿಂದಲೋ ಹೆದರಿ ದೇವರಕೋಣೆಯ ಮೂಲೆಯಲ್ಲಿ ಮುಖಸಿಂಡರಿಸಿ ಕೂತಿದ್ದವನಿಗೆ, 'ಫಸ್ಟ್ ಕ್ಲಾಸಿನಲ್ಲಿ ಪಾಸಾಗಿದೀಯ ಹೊರಗೆ ಬಾರೋ' ಎಂದು ಕೂಗಿದಾಗ, ಅನುಮಾನದಿಂದಲೇ ಹೊರಬಂದು ನಿಜ ತಿಳಿದು ಎದೆಯುಬ್ಬಿಸಿ ಹೀರೋನಂತೆ ಕಾಲರ್ ಎಗರಿಸಿದ್ದ.

ಮನೆಯ ಹೊರಭಾಗದ ಕೋಣೆಯಲ್ಲಿ ಹೊಸದಾಗಿ ಮದುವೆಯಾದ ಸೋದರತ್ತೆಯರ ಶೋಭನ ನಡೆದರೆ, ಹೆರಿಗೆ ಮಾತ್ರ ಇದೇ ದೇವರ ಕೋಣೆಯಲ್ಲಿ. ಅಲ್ಲಿಯ ಚೀರಾಟ, ಸೂಲಗಿತ್ತಿ ಕೂಗಿ ಹೇಳುತ್ತಿದ್ದ ಬಿಸಿನೀರು, ತಣ್ಣೀರು, ಬಟ್ಟೆ, ಸೋಪು, ಬ್ಲೇಡು ಎಂದು ಅಡುಗೆಮನೆ, ಬಚ್ಚಲುಮನೆ ಹಾಗೂ ದೇವರಕೋಣೆಗೆ ಪುರುಸೊತ್ತಿಲ್ಲದಂತೆ, ಸೀರೆಯ ನೆರಿಗೆ ಹಾಗೂ ಸೆರಗನ್ನು ಸೊಂಟಕ್ಕೆ ಸಿಗಿಸಿಕೊಂಡು ಅಮ್ಮ ಅಜ್ಜಿಯರ ಸರಭರ ಓಡಾಟ ಸಾಗಿ, ನಂತರ ನವ ಜೀವದ ಆಗಮನವನ್ನು ಸೂಚಿಸುವ ಅಳುವಿಗೆ ಸಾಕ್ಷಿಯಾಗುತ್ತಿದ್ದುದು ಇದೇ ಕೋಣೆ. ಮತ್ತೆ ಮೂರು ದಿನಕ್ಕೆ ತಾಯಿ ಮಗು ಹೊರಗಿನ ಕೋಣೆಗೆ ಶಿಫ್ಟ್ ಆಗುತ್ತಿದ್ದರು. ಹೊರಗಿನ ಕೋಣೆಯಲ್ಲಿರುತ್ತಿದ್ದ ಚಿಕ್ಕಪ್ಪ ಚಿಕ್ಕಮ್ಮ ಇಂತಹ ಸಮಯದಲ್ಲೆಲ್ಲ ತಮ್ಮ ಕೋಣೆ ಬಿಟ್ಟುಕೊಡಬೇಕಾಗುತ್ತಿತ್ತು. ರಾತ್ರಿಯ ಹೊತ್ತು ಅಡುಗೆ ಕೋಣೆ ಅವರ ಮಲಗುವ ಕೋಣೆಯಾಗಿ ಬದಲಾಗುತ್ತಿತ್ತು. ಆಗಷ್ಟೇ ಅಲ್ಲ, ಸೋದರತ್ತೆಯರು ಹೊಸದಾಗಿ ಮದುವೆಯಾದ ಸಮಯದಲ್ಲಿ, ಮನೆಗೆ ಹೆಚ್ಚು ಜನ ಬರುವ ಸಂದರ್ಭ ಹೆಚ್ಚಿರುತ್ತಿದ್ದುದರಿಂದ, ಅಡುಗೆ ಕೋಣೆಯಲ್ಲೇ ಅವರು ಹೆಚ್ಚು ಮಲಗುತ್ತಿದ್ದುದು ಎನ್ನಬೇಕು. ಆದರೆ ದೇವರಕೋಣೆಯಿಂದ ಅಮ್ಮ ಅಪ್ಪ ಹೊರಬಿದ್ದಿದ್ದು ತುಂಬ ಎಂದರೆ ತುಂಬ ಕಡಿಮೆ. ಮೂರನೆಯ ಹೆರಿಗೆಗೆ ತವರಿನವರು ಕರೆದುಕೊಂಡು ಹೋಗುವ ಶಾಸ್ತ್ರ ಇಲ್ಲದ ಕಾರಣ, ಅಮ್ಮನ ಮೂರನೆಯ ಹೆರಿಗೆಯಾಗಿ ತಮ್ಮ ಹುಟ್ಟಿದ್ದು ಇದೇ ಕೋಣೆಯಲ್ಲೇ. ತುಂಬು



ಕುಟುಂಬದಲ್ಲಿ ಮುಂಜಾನೆ ಐದು ಗಂಟೆಯಿಂದ ಯಂತ್ರದಂತೆ ಪುರುಸೊತ್ತಿಲ್ಲದಂತೆ ಕೆಲಸ ಮಾಡಿ ರೋಸಿ ಹೋಗುತ್ತಿದ್ದ ಮನೆಯ ಸೊಸೆಯಂದಿರಿಗೆ ಮಧ್ಯಾಹ್ನದ ಹೊತ್ತು ಸಣ್ಣ ನಿದ್ದೆಗೆ ನೆರವಾಗುತ್ತಿತ್ತು ಈ ದೇವರಕೋಣೆ. ಚಾಪೆಯ ಗೊಡವೆಗೂ ಹೋಗದೆ, ನೆಲಕ್ಕೇ ದಿಂಬು ಎಸೆದು, 'ಉಶ್' ಎಂದು ಮಲಗಿ ನಿದ್ದೆ ಹೋಗಿಬಿಡುತ್ತಿದ್ದರು.

ನಾವೆಲ್ಲ ಮಕ್ಕಳು ಸ್ನಾನದ ನಂತರ ಬಾಚಣಿಗೆ, ಕೊಬ್ಬರಿಎಣ್ಣೆ ಡಬ್ಬಿ, ಪೌಡರ್, ಐಟೆಕ್ಸ್ ಸಾದಾ ಕುಂಕುಮ ರೆಡಿಮಾಡಿಕೊಂಡು ತಲೆಬಾಚಲು ಈ ದೇವರಕೋಣೆಯ ಹೊಸ್ತಿಲ ಮುಂದೆ ಕುಳಿತು 'ಅಮ್ಮಾ' ಎಂದು ಕೂಗು ಹಾಕುತ್ತಿದ್ದೆವು. ಬಂದವಳೇ ದೇವರ ಕೋಣೆಯ ಬಾಗಿಲಿನ ಮೂಲೆಗೆ ಕುಳಿತು ಒಬ್ಬೊಬ್ಬರಿಗೇ ಕೂದಲಿಗೆ ಎಣ್ಣೆ ಹಚ್ಚಿ, ಹಿಕ್ಕು ಬಿಡಿಸುವಾಗ ಚೀರುತ್ತಿದ್ದಂತೆ, ತಲೆಗೆ ಮೊಟಕುತ್ತ ಎರಡು ಬದನೆಕಾಯಿ ಜಡೆ ಕಟ್ಟಿ, ಮುಂದಕ್ಕೆ ತಿರುಗಲು ಹೇಳುತ್ತಿದ್ದಳು. ತನ್ನ ಸೆರಗನ್ನೇ ದುಂಡಗೆ ಪಫ್ ತರಹ ಮಾಡಿಕೊಂಡು, ಅದಕ್ಕೊಂದಿಷ್ಟು ಪೌಡರ್ ಕೊಡವಿ, ನಮ್ಮ ಮುಖಕ್ಕೆ ಮೆತ್ತಿ, ಅಲ್ಲಾಡದೆ ಕುಳಿತುಕೊಳ್ಳಲು ಹೇಳಿ, ಸಾದಾ ಕುಂಕುಮವನ್ನು ಹಣೆಯ ಮಧ್ಯಭಾಗಕ್ಕೆ ಸೀದಾ ಇಡಲು ಹೋಗಿ, ಅದು ಕೆಲವೊಮ್ಮೆ ಸೊಟ್ಟ ಆಗಿ, ಮತ್ತೆ ಸೆರಗಿಗೆ ಚೂರು ನೀರು ಚಿಮುಕಿಸಿಕೊಂಡು, ಅದನ್ನು ಅಳಿಸಿ, ಮುಖವನ್ನೆಲ್ಲ ಕೆಂಪಗಾಗಿಸಿ, ಮತ್ತೆ ಪೌಡರ್ ಮೆತ್ತಿ ಕುಂಕುಮ ಇಟ್ಟು, ರೆಡಿ ಮಾಡಿ ಶಾಲೆಗೆ ಅಟ್ಟುತ್ತಿದ್ದಳು.

ಮುಂದೆ ಆಸ್ತಿ ಪಾಲಾದಾಗ, ಹಿರಿಯ ಮಗನಾಗಿದ್ದ ಅಪ್ಪನ ಪಾಲಿಗೆ ಬಂದಿದ್ದು, ಹತ್ತಾರು ಮದುವೆ ಮಾಡಿದ, ಇಪ್ಪತ್ತೈದು ಮೂವತ್ತು ಮಕ್ಕಳು ಹುಟ್ಟಿದ ಅದೇ ಹಳೆಯ ಮನೆ. ಅಷ್ಟು ಹೊತ್ತಿಗೆ ಹಸು, ಕರುವಿನ ಚಾಕರಿ ಹೆಚ್ಚು ಎಂದು ಮಾರಿದ್ದೂ ಆಗಿತ್ತು. ದೇವರುಗಳನ್ನೆಲ್ಲ ಅಡುಗೆಯ ಮನೆಯ ಪಕ್ಕದಲ್ಲಿ ಹೊಸದಾಗಿ ಕಟ್ಟಿಸಿದ ದೇವರ ಮನೆಗೆ ಸ್ಥಳಾಂತರಿಸಿ, ಅದರ ಕೆಳಗಿನ ಹಿಟ್ಟಿನ ಬೀರೂವನ್ನು ಒಡೆಸಿ, ಗಳ, ಶೆಲ್ಫು ತೆಗೆಸಿ ಕಾಲಕ್ಕೆ ತಕ್ಕಂತೆ ಆ ಕೋಣೆಯನ್ನು ಅಪ್ಪ ಆಧುನಿಕವಾಗಿ ಪರಿವರ್ತಿಸಿದ್ದರು. ಪುಟ್ಟ ಬೀರುವನ್ನು ಮುಚ್ಚಿಸಿ, ಅದರ ಮುಂದೆ, ಬಾಗಿಲಿಗೆ ಆಳೆತ್ತರದ ಕನ್ನಡಿ ಅಳವಡಿಸಿದ ಕಬ್ಬಿಣದ ದೊಡ್ಡ ಬೀರು ನಗೆಬೀರುತ್ತ ನಿಂತಿತ್ತು. ನೆಲ ಹಾಗೂ ಸುಣ್ಣದ ಗೋಡೆಗಳೆಲ್ಲ ಫಳಫಳ ಹೊಳೆಯುವ ಟೈಲ್ಸ್‌ಗಳನ್ನು ಹೊದ್ದು ಮಿಂಚುದ್ದವು. ಟ್ರಂಕು, ಚಾಪೆ, ಹಾಸಿಗೆ ದಿಂಬುಗಳೆಲ್ಲ ಗುಜರಿಗೆ ಸೇರಿ, ಕಟ್ಟಿಗೆಯ ಮಂಚ ದೇವರಕೋಣೆಗೆ ಸೇರಿ ಆಧುನಿಕ ಶೈಲಿಯ ಬೆಡ್‌ರೂಮ್ ಆಗಿ ಬದಲಾಯಿತು. ಅದೆಷ್ಟೇ ಬದಲಾದರೂ ಈಗಲೂ ಆ ಕೋಣೆಯ ಬಗ್ಗೆ ಹೇಳುವಾಗ ಎಲ್ಲರಿಗೂ 'ಆ ದೇವರ ಕೋಣೆ' ಎಂದೇ ಕರೆಯುವುದು ರೂಢಿಯಾಗಿದೆ.

ಹಿರಿಯರು ಕಾವಾದರು, ಹೆಣ್ಣುಮಕ್ಕಳು ಮದುವೆಯಾಗಿ ಹೋದರು, ಗಂಡುಮಕ್ಕಳು ಭಾಗವಾಗಿ ಬೇರೆ ಸಂಸಾರ ಹೂಡಿದರು, ಆದರೆ ಮನೆಯ ಹಿರಿಸೊಸೆಯಾಗಿ ಕಾಲಿಟ್ಟು, ತನ್ನ ನಲವತ್ತೈದು ವರ್ಷದ ಸಾಂಸಾರಿಕ ಜೀವನವನ್ನು ಅದೇ ದೇವರಕೋಣೆಯಲ್ಲಿ ಸವೆಸಿದ ಕೀರ್ತಿ ಅಮ್ಮನದು. ಇಡೀ ಮನೆ ತನ್ನದಾದಾಗಲೂ, ಮುಂದಿನ ದೊಡ್ಡ ಕೋಣೆಗೆ ಎಂದೂ ಸ್ಥಳ ಬದಲಾವಣೆ ಬಯಸಲಿಲ್ಲ. ತನ್ನ ಹೆಣ್ಣುಮಕ್ಕಳ ಮದುವೆಯಾದರೂ, ತನಗೇ ಸೊಸೆ ಬಂದರೂ, ಅವರಿಗೇ ಅದನ್ನು ಬಿಟ್ಟುಕೊಟ್ಟು ಇದೇ ಕೋಣೆಯನ್ನು ಗಟ್ಟಿಯಾಗಿ ಹಿಡಿದಿದ್ದಳು. ತನ್ನ ಕೊನೆಗಾಲದಲ್ಲಿಯೂ ಇದೇ ದೇವರಕೋಣೆಯಲ್ಲಿ ಹಾಸಿಗೆ ಹಿಡಿದು, ಬೆಂಗಳೂರಿನ ಆಸ್ಪತ್ರೆ ಸೇರಲು ಖಡಾಖಂಡಿತವಾಗಿ ನಿರಾಕರಿಸಿ, ಸತ್ತರೆ ಇಲ್ಲೇ ಸಾಯುತ್ತೇನೆ ಎಂದು ಹಠಹಿಡಿದಿದ್ದಳು. ದೇವರಿಲ್ಲದ ದೇವರಕೋಣೆಯಲ್ಲಿ ಅಮ್ಮ ದೇವರಾದಳು.

ಪ್ರತಿಕ್ರಿಯಿಸಿ: **feedback@sudha.co.in**